Indian Journal of History and Archaeology

ISSN (E):2582-225X
VOL-2, ISSUE -6, MAR-APRIL, 2021, 54-66

# ಗ್ರಾಮೀಣ ಸಮುದಾಯಗಳ ಶಕ್ತಿ ದೇವತೆ –ಒಂದು ಅವಲೋಕನ

**ಪುರುಷೋತ್ತಮ**

**ಪುರುಷೋತ್ತಮ**
ಸಂಶೋಧಕರು
ಕರ್ನಾಟಕ ಜಾನಪದ
ವಿಶ್ವವಿದ್ಯಾಲಯ ಗೊಟಗೋಡಿ,
ಶಿಗ್ಗಾವಿ ತಾಲ್ಲೂಕು ಹಾವೇರಿ ಜಿಲ್ಲೆ

ಗ್ರಾಮೀಣ ಪ್ರದೇಶದಲ್ಲಿ ಬದುಕನ್ನು ಕಟ್ಟಿಕೊಂಡಿರುವಂಥ ತಳಸಮುದಾಯಗಳು ಆರಾಧಿಸುವ ದೈವ ಶಕ್ತಿಯೇ ಮಾರಮ್ಮ. ಯಾವ ಯಾವ ಜನಸಮುದಾಯಗಳು ಅವರ ಮಾಂಸಾಹಾರವನ್ನು ಸೇವಿಸುವ ಜನಗಳು ಆರಾಧ್ಯ ದೈವವೇ ಆಗಿದ್ದಾಳೆ. ಹಾಗೆಯೇ ಆಕೆಯು ಶಾಂತಿಗೊಡುವ ಇಷ್ಟ ಸಿದ್ದಾರ್ಥಿಗಳನ್ನು ಪೂರೈಸುವ ಐತಿಹಾಸಿಕ ಮನೆಯ ಮಾತೆಯಾಗಿದ್ದಾಳೆ. ಅವಳ ಬೇಕು, ಬೇಡಗಳನ್ನು ಪೂಜೆ ಕೈಂಕರ್ಯಗಳನ್ನು ಗ್ರಾಮೀಣ ಜನಸಮುದಾಯಗಳು ಜಾನಪದ ಪರಂಪರೆಯ ಮೂಲಕ ನೆರವೇರಿಸುತ್ತಾರೆ. ಈ ನೆಲೆ–ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನವನ್ನು ಮಾರಮ್ಮನ ನೆಲೆ, ಪುರಾಣ, ಐತಿಹ್ಯ, ಕಥೆಗಳು, ಜಾನಪದ ಲಕ್ಷಣವನ್ನು ಹೆಚ್ಚಿನ ರೀತಿಯಲ್ಲಿ ಅರಿಯುವುದು ಬಹು ಮುಖ್ಯ ಉದ್ದೇಶವಾಗಿದೆ.

ಮಾರಮ್ಮನ ವಾಸದ ಅಥವಾ ಪ್ರತಿಷ್ಠಾಪನೆಯ ನೆಲೆಗಳನ್ನು ಶೋಧಿಸಿದಾಗ ಊರ ಹೊರ ಭಾಗದಲ್ಲಿಯೇ ಹೆಚ್ಚಿನ ರೀತಿಯಲ್ಲಿ ನೆಲೆಸಿರುವುದಕ್ಕೆ ಸಾಕಷ್ಟು ಕಾರಣಗಳಿವೆ. ಸರ್ವೇ ಸಾಮಾನ್ಯವಾಗಿ ಈ ಉಗ್ರ ದೇವತೆಗಳೆಲ್ಲವೂ ಕೂಡ ಸಿಂಹ ವಾಹಿನಿಗಳಾಗಿರುತ್ತದೆ. ಆದ್ದರಿಂದಲೇ ಮಾರಮ್ಮನ ಆವಾಸ ಸ್ಥಾನವು ಅಷ್ಟು ವೈಭವ ಹಾಗೂ ಕಲಾತ್ಮಕವಾಗಿರದೇ ಇರುವುದು ಒಂದು ಆಶ್ಚರ್ಯಕರ ಸಂಗತಿಯಾಗಿರುತ್ತದೆ. ಬಹುಶಃ ಈ ದೇವತೆಯ ಹೆಚ್ಚಿನ ಭಕ್ತರು ಹಿಂದುಳಿದ ಹಾಗೂ ನಿಮ್ನವರ್ಗದವರೇ ಆಗಿದ್ದು, ಇವರ ಆರ್ಥಿಕ ಮುಗ್ಗಟ್ಟೇ ಇದಕ್ಕೆ ಪ್ರಮುಖ ಕಾರಣವಿರಬಹುದು. ಆದರೆ ಉನ್ನತವರ್ಗದ ದೇವತಾ ವಾಸಸ್ಥಾನಗಳು ಭವ್ಯ ಹಾಗೂ ಕಲಾತ್ಮಕವಾಗಿರುವುದಕ್ಕೂ ಅದೇ ಕಾರಣ. ಮತ್ತೊಂದು ಕಾರಣವೆಂದರೆ; ಈ ದೇವತೆಯ ಉಪಾಸಕರು ಆದಿಮ ಜಾತಿಯವರಾಗಿದ್ದು ಅವರ ಜಾತಿಯ ಒಬ್ಬ

***ISSN (E):2582-225X,* VOL-2, ISSUE -6, MAR-APRIL, 2021, 54-66**

ವ್ಯಕ್ತಿಯನ್ನು ಮಾರಮ್ಮನು ಉಗ್ರವಾಗಿ ಹಿಂಸಿಸಿ ಬಲಿ ತೆಗೆದುಕೊಂಡ ಕಾರಣ ಅವಳ ಬಗ್ಗೆ ಅನಾದರ ಉಂಟಾಗಿ ಊರ ಹೊರಗೆ ಒರಟು ದೇವಸ್ಥಾನದಲ್ಲಿ ಪ್ರತಿಷ್ಠಾಪಿಸಿರಬಹುದು. ನಿಮ್ನ ಜಾತಿಯವರು ಸಹ ಆ ದೇವತೆಯನ್ನು ತಮ್ಮ ಕುಲದೇವತೆಯೆಂದು ಕರೆಯುತ್ತಿರುವುದು ತಿಳಿದುಬರುತ್ತದೆ. ಆ ಶಕ್ತಿ ದೇವತೆಯನ್ನು ಗೌರವಸೂಚಕವಾಗಿ ತೆಗೆದುಕೊಳ್ಳುವುದಾದರೆ; ಆಕೆಯು ಆ ಗ್ರಾಮದ ಜನರ ಪಶು ಪಕ್ಷಿಗಳ ರಕ್ಷಣಾ ಭಾರವನ್ನು ಪ್ರಧಾನವಾಗಿ ಹೊತ್ತು ಊರ ಕಾವಲಿನಲ್ಲಿ ಊರ ಹೊರಗೆ ಇರುವಳೆಂದೂ ಭಾವಿಸಬಹುದಾಗಿದೆ. ಊರಿನೊಳಕ್ಕೆ ಹೊರಗಿನಿಂದ ಯಾವ ಅನಿಷ್ಠ ಶಕ್ತಿಗಳು ಪ್ರವೇಶಿಸದಿರಲೆಂದು ಊರ ಹೊರಗೆ ಸ್ಥಾಪಿಸಲಾಗಿದೆಯೆಂದೂ ಕೆಲವು ಐತಿಹ್ಯಗಳು ಸಾದರಪಡಿಸುತ್ತವೆ. ಆ ಕಾರಣಗಳಿಂದಾಗಿಯೇ ಮಾರಮ್ಮ ದೇವಸ್ಥಾನಗಳಲ್ಲಿ ಕೆಲವು ಕಲ್ಲು ಕಂಬಗಳನ್ನು ನೆಟ್ಟು ಅವುಗಳ ಮೇಲೆ ಕಲ್ಲು ಚಪ್ಪಡಿಗಳನ್ನೆಳೆದು ಒರಟು ಮಣ್ಣಿನಿಂದ ಮೆತ್ತಿ ಸುಣ್ಣ ಕೆಮ್ಮಣ್ಣುಗಳ ಪಟ್ಟೆಗಳನ್ನು ಬಳಿದಿರುವುದನ್ನು ಇಂದಿಗೂ ಕೂಡ ಗ್ರಾಮೀಣ ಪ್ರದೇಶಗಳಲ್ಲಿ ಗುರುತಿಸಬಹುದು. ಏಕೆಂದರೆ, ಮಾರಮ್ಮ ಉಗ್ರಿಯಾಗಿದ್ದಾಳೆ. ಆ ಮಾರದಿಯಲ್ಲಿ ಆಕೆಯನ್ನು ಗ್ರಾಮೀಣ ಪ್ರದೇಶಗಳಲ್ಲಿ ಚಿತ್ರಿಸಿ, ಪೂಜಿಸಿ ಆರಾಧಿಸುತ್ತಿದ್ದಾರೆ. ಆಕೆಯನ್ನು ಸಂತೃಪ್ತಿ ಪಡಿಸಲು ಹಸಿ ಅಕ್ಕಿ ಬೆಲ್ಲವನ್ನು ಸೇರಿಸಿ ಮುದ್ದೆಯನ್ನು ಮಾಡಿ ಅಪಹರಿಸುತ್ತಾರೆ. ಆವಾಗ ಶಾಂತರೂಪಕ್ಕೆ ಬರುತ್ತಾಳೆ ಎಂಬ ನಂಬಿಕೆ–ಆಚರಣೆ ಇದೆ.

ಗ್ರಾಮೀಣ ಜನವರ್ಗಗಳು ಪ್ರತಿಯೊಂದು ಬಾರಿ ಕಾಯಿಲೆ ಕಸಾಲೆಗಳಿಗೆ ತುತ್ತಾದಾಗ ಹಾಗೂ ಕಷ್ಟಗಳು ಒದಗಿ ಬಂದಾಗ ಮಾರಮ್ಮನನ್ನು ಜ್ಞಾಪಿಸಿಕೊಂಡು ಆಕೆಯ ಮೊರೆ ಹೋಗುತ್ತಾರೆ. ಆಗ ಅದನ್ನು ಸ್ವಚ್ಛಗೊಳಿಸಿ ದೇವಿಯನ್ನು ಸಂತೃಪ್ತಿಪಡಿಸಲಿಕ್ಕೆ ಪ್ರಯತ್ನ ಪಡುತ್ತಾರೆ. ಅಂದರೆ ಮಾರಮ್ಮ ಕೋಪಿಸಿಕೊಂಡಿದ್ದಾಳೆ. ಆಕೆಯನ್ನು ಶಾಂತಗೊಳಿಸಲು ಪ್ರಾಣಿ–ಪಕ್ಷಿಗಳನ್ನು ಮೂಲಕ ಅವಳನ್ನು ದೂಷಣೆ ಮಾಡುತ್ತಾರೆ. ಇದರ ಜೊತೆಗೆ ಗ್ರಾಂಕ್ಕೆ ಒದಗಿರುವ ಕಂಟಕದಿಂದ ಗಾಳಿ ಗ್ರಹಚಾರವನ್ನು ನಿಯಂತ್ರಿಸಲು ತಮ್ಮದೇ ಆದ ರೀತಿಯಲ್ಲಿ ಆಚರಣೆಯನ್ನು ಊರಿನ ಎಲ್ಲರೂ ಸೇರಿಕೊಂಡು ನೆರವೇರಿಸುತ್ತಾರೆ. ಅನೇಕ ಕಾಯಿಲೆಗಳಿಗೆ ತುತ್ತಾದ ಮೂಢ ಜನರು ಆ ಕಾಯಿಲೆಗಳಿಗೆ ಮಾರಮ್ಮನೇ ಕಾರಣವೆಂದು ಆಕೆಯ ವಿಗ್ರಹಗಳನ್ನು ಜೇಡಿಮಣ್ಣಿನಲ್ಲಿ ತಯಾರಿಸಿ ಕೆಂಪನ್ನ, ಹಳದಿದಂಥ ವಿವಿಧ ಬಣ್ಣಗಳ ಆಹಾರ ಅನ್ನ ಮುಂತಾದ ಆಹಾರ ಪದಾರ್ಥಗಳೊಂದಿಗೆ ಪೂಜಿಸಿ ಕಾಯಿಲೆಯಲ್ಲಿ ನರಳುವ ವ್ಯಕ್ತಿಯ ಮುಂದೆ ನೀವಳಿಸಿ ಊರು ಬಿಟ್ಟು ದೂರ ಒಂದು ಗಡಿಯಲ್ಲಿ ಆ ವಿಗ್ರಹವನ್ನು ಇಟ್ಟು ಬರುವುದೂ ವಾಡಿಕೆಯಲ್ಲಿದೆ. ಹೀಗೆ ಮಾರಮ್ಮ ಜನರಿಗೆ ಕಷ್ಟಕೋಟಲೆಗಳಿಂದ ನರಳಿಸಿ ತನ್ನನ್ನು ಪೂಜಿಸಿಕೊಂಡು ತೃಪ್ತಿಯಾದಲ್ಲಿ ನಂತರ ಅವರ ಇಷ್ಟಾರ್ಥಗಳನ್ನು ಈಡೇರಿಸುವ ರೂಪದಲ್ಲಿ ಪ್ರಸಿದ್ಧಿಯನ್ನು ಪಡೆದಿದ್ದಾಳೆ.

ಮೇಲ್ವರ್ಗದ ಶಿಷ್ಟ ದೇವತೆಗಳು ನೈವೇದ್ಯ, ಪ್ರಸಾದ, ಪುಷ್ಪಗಳಿಂದ ತೃಪ್ತಗೊಂಡರೆ, ನಿಮ್ನ ವರ್ಗದ ದುಷ್ಟ ಉಗ್ರ ದೇವತೆಗಳು ಪಶು-ಪಕ್ಷಿಗಳ ರಕ್ತ-ಮಾಂಸಗಳಿಂದ ತೃಪ್ತವಾಗುತ್ತವೆ ಎಂಬುದಕ್ಕೆ ಆಯಾವರ್ಗದ ಜನರ ಆಹಾರ ಸೇವನೆಯೇ ಕಾರಣವೆಂಬುದನ್ನು ಗುರುತಿಸಬಹುದು. ಮಾಂಸಾಹಾರವನ್ನು ಇಚ್ಛಿಸುವ ನಿಮ್ನ ವರ್ಗದವರು ಹೆಚ್ಚಾಗಿ ಉಗ್ರ ದೇವತೆಗಳನ್ನು ಸೃಷ್ಟಿಸಿಕೊಂಡು ಅವುಗಳನ್ನು ಪೂಜಿಸಿ ತೃಪ್ತಿಪಡಿಸುವ ನೆಪದಲ್ಲಿ ಪ್ರಾಣಿ-ಪಕ್ಷಿ ಬಲಿಗಳನ್ನು ಕೊಟ್ಟು ತಾವೇ ಸೇವಿಸುವುದು ಒಂದು ನಂಬಿಕೆಯಾಗಿರುವುದರಿಂದ ಊರ ಹೊರಗೆಯೇ ಮಾರಮ್ಮನನ್ನು ಪ್ರತಿಷ್ಠಾಪಿಸಿಕೊಂಡಿರುವುದನ್ನು ಕಾಣಬಹುದು.

ಹಿಂದಿನಿಂದ ಅಂದರೆ; ಊರು ಹುಟ್ಟುವ ಮೊದಲೇ ಈ ಶಕ್ತಿದೇವತೆಯೂ ಕಾಡು, ಮೇಡು, ಬೆಟ್ಟ, ಕಲ್ಲುಗುಡ್ಡಗಳ ಮಧ್ಯೆ ನೆಲೆಸಿದ್ದು, ಈ ಊರಿನ ಮೂಲದ ಜನ ಸುತ್ತಲ ನೆಲೆಯಲ್ಲಿ ಏಳು ಕಡೆ ಊರು ಕಟ್ಟಲು ಅಸ್ಥಿಭಾರ ಹಾಕಿದ್ದರೂ ಯಾವ ಜಾಗದಲ್ಲೂ 'ಆಗು' ಬರದೇ ಕಡೆಗೆ ಈ ಸತ್ಯ ಮಾರಮ್ಮ ನೆಲೆಸಿದ್ದ ಜಾಗದಲ್ಲಿ ಊರು ವೃದ್ಧಿಯಾಗಿ ಯಾವುದೇ ಕಷ್ಟ ಬಾಧೆಗಳಿಲ್ಲದೇ ಬೆಳೆದುಬಂತು. ಆದರೆ ಮಾರಮ್ಮ ತನ್ನ ಸಲುವಾಗಿ ಒಂದು ನೆರಳಿನ ಒಪ್ಪಾರವನ್ನೂ ಬಯಸಿದವಳಲ್ಲ. ಯಾರೋ ಭಕ್ತರು ಸುತ್ತ ಕಟ್ಟಡ ಎಬ್ಬಿಸಲು ಹೊರಟಾಗ ಪೂಜಾರಿಯ ಮೈಮೇಲೆ ದೇವರು ಬಂದು ತನಗೆ ಯಾವುದೇ ಕಟ್ಟಡ ಬಾಗಿಲು ಸರಳುಗಳಿಂದ ಬಂಧಿಸಬಾರದು. ತಾನು ಹೀಗೆಯೇ ಅನಾದಿಯಿಂದ ಬಿಸಿಲಿಗೆ ಒಣಗುತ್ತಾ ಗಾಳಿ ಮನೆಗೆ ನೆನೆಯುತ್ತಾ ಹಗಲು ರಾತ್ರಿ ಊರಿನ ಹಿತಕ್ಕಾಗಿ ಕಾವಲು ಕಾಯುತ್ತಿರುವುದಾಗಿ ತನ್ನನ್ನು ಹೀಗೆಯೇ ಬಯಲು ಬಿಡುವಲ್ಲಿ ಪೂಜಿಸಬೇಕಾಗಿ ಕಟ್ಟಪ್ಪಣೆ ಕೊಡಿಸಿದಳಂತೆ, ಆ ಕ್ರಮವೂ ಇದುವರೆವಿಗೂ ಅದೇ ರೀತಿ ನಡೆದುಕೊಂಡೇ ಬಂದಿದೆ. ಇತ್ತೀಚೆಗೆ ಕೆಲವೆಡೆ ಮಾರಮ್ಮನನ್ನು ಕೇಂದ್ರಿಕರಿಸಿದಂತೆ ಸುತ್ತಲೂ ಗೋಡೆಯನ್ನು ನಿರ್ಮಿಸಿ ಅವಳನ್ನು ಬಂಧಿಸಲಾಗಿದೆ. ಅಂದರೆ; ಆಕೆಗೆ ಒಂದು ಗುಡಿಯನ್ನು ಕಟ್ಟಿಸಿ ಪೂಜಿಸುತ್ತಿದ್ದಾರೆ.

**ಮಾರಮ್ಮನ ನೆಲೆ, ಪುರಾಣ, ಐತಿಹ್ಯ, ಕಥೆಗಳ ಮಾರಮ್ಮನ ಅಕ್ಕ-ತಂಗಿಯರು**

ಮಾರಮ್ಮನ ಅಕ್ಕತಂಗಿಯರು ಏಳು ಜನರೆಂದು ಗ್ರಾಮೀಣ ಪ್ರದೇಶದಲ್ಲಿನ ಜನಪದರು ಇಂದಿಗೂ ಕೂಡ ಹೇಳುತ್ತಾರೆ. ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಮಾರಮ್ಮನನ್ನು ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಾರೆ. ಅವುಗಳೆಂದರೆ;

**'ಅಕ್ಕ ತಂಗಿಯರು ಲೆಕ್ಕಕ್ಕೆ ಏಳ್ವಾರು**
**ಮಡಿ ಉಟ್ಟ ಮೇಲೆ ಚದುರೇರು ಹೊರಟ್ಯಾರ**
**ನೋಡು ನಡೆ ಮಡಿ ಮ್ಯಾಲಿನ ಚೆಂದಾವ'**

ಎನ್ನುವ ಜನಪದ ಹಾಡನ್ನು ಹಾಡುತ್ತಾರೆ. ಇದರಿಂದ ಮಾರಮ್ಮನ ಅಕ್ಕ ತಂಗಿಯರು ಏಳು ಜನರೆಂಬುದು ಸ್ಪಷ್ಟವಾದರೂ ಯಾರ್ಯಾರೂ ಎಂಬುದಕ್ಕೆ ಒಂದು ಭಾಗದಲ್ಲಿ ಒಂದು ರೀತಿ ಹೇಳಿದರೆ, ಮತ್ತೊಂದು ಭಾಗದಲ್ಲಿ ಬೇರೆ ಬೇರೆ ಹೆಸರುಗಳನ್ನು ಹೇಳುತ್ತಾರೆ. ದ್ಯಾವಮ್ಮ, ದುರುಗಮ್ಮ, ಕಾಳಮ್ಮ, ಚೌಡಮ್ಮ, ಪಾಲಕಮ್ಮ, ಎಲ್ಲಮ್ಮ ಮತ್ತು ಮರುಗಮ್ಮ ಅಥವಾ ಮಾರಮ್ಮ.

ಕೆಲವರು ಮಾರಮ್ಮನಿಗೆ ತಂಗಿಯರು ಇದ್ದಾರೆಂದೂ ಹೇಳುತ್ತಾರೆ. ಅವರುಗಳೆಂದರೆ, ದಂಡಿನ ಮಾರಮ್ಮ, ಪಳೇಕನಮ್ಮ, ಅನೆಕೆರೆಯಮ್ಮ, ಮಾರಮ್ಮನ ಹಬ್ಬ ಮುಗಿದ ಅನಂತರ ತನ್ನ ಅಕ್ಕ-ತಂಗಿಯರ ಜೊತೆ ಅವಳು ಕೈಲಾಸಕ್ಕೆ ಹೊರಡುತ್ತಾಳೆ. ಹೋಗುವಂಥ ಸಂದರ್ಭದಲ್ಲಿ ಗ್ರಾಮದ ರಕ್ಷಣೆಗೆ ಇತರ ದೇವತೆಗಳನ್ನು ನೇಮಕ ಮಾಡಿ ಹೋಗಿರುತ್ತಾಳೆ ಎನ್ನುವ ನಂಬಿಕೆಯನ್ನು ನಮ್ಮ ಜನಪದರು ಹೊಂದಿದ್ದಾರೆ. ಏಕೆಂದರೆ, ಸದಾ ಊರನ್ನು ಕಾಯುವ ಮಾರಮ್ಮ ಸ್ವಲ್ಪ ದಿನವಾದರೂ ತನ್ನ ಅಕ್ಕತಂಗಿಯರ ಜೊತೆ ಸುಖ ಸಂತೋಷದಿಂದ ಇರಲು ಅವಕಾಶಗಳನ್ನು ಕಲ್ಪಿಸಿಕೊಡುವ ಉದ್ದೇಶವನ್ನು ಇತರೆ ಗ್ರಾಮ ದೇವತೆಗಳು ಹೊಂದಿರುತ್ತಾರೆ ಎನ್ನುವ ಜನಪದರ ಪ್ರತೀತಿ ಇದೆ.

ಜಾತ್ರೆಯ ಸಂದರ್ಭದಲ್ಲಿ ಮಾತ್ರ ಊರಿನ ಗ್ರಾಮಸ್ಥರೆಲ್ಲರೂ ಸೇರಿ ಮಾರಮ್ಮನ ಅಕ್ಕತಂಗಿಯರನ್ನು ಆಹ್ವಾನಿಸುತ್ತಾರೆ. ಬೇರೆ ಗ್ರಾಮದ ಮುಖಂಡರಿಗೆ ವೀಳ್ಯವನ್ನು ಕೊಡುವುದರ ಮೂಲಕ ಮಾರಮ್ಮನ ಹಬ್ಬಕ್ಕೆ ತಮ್ಮ ದೇವತೆಯನ್ನು ಕಳುಹಿಸಿಕೊಡಬೇಕು ಎಂಬ ಅಹವಾಲನ್ನು ಹಬ್ಬ ಮಾಡುವ ಗ್ರಾಮಸ್ಥರು ನೆರೆಹೊರೆಯ ಗ್ರಾಮದವರು ಮುಂದಿಟ್ಟು ಹಬ್ಬವನ್ನು ಜರುಗಿಸುತ್ತಾರೆ.

ದ್ರಾವಿಡರ ಆರಾಧನೆಯಲ್ಲಿ ಮಾರಮ್ಮನನ್ನು ಗುರುತಿಸುವುದಾದರೆ, ಆಂಧ್ರಪ್ರದೇಶದ ಕರ್ನಾಲ್ ಜಿಲ್ಲೆಯ ಕನ್ನಡ ಶೈವಶಾಸನ ಒಂದರಿಂದ ಭೈರವ ದೇವನ ಹೆಸರಿನೊಂದಿಗೆ ದೇವೀ, ತ್ರಿಪುರಾ, ಕರಾಳೀ, ಕಾಳೀ, ಸ್ಮಶಾನಲತವಾಸಿನೀ, ಸಿಂಹವಾಹಿನೀ ಎಂದು ಕೆತ್ತಿರುವುದು ಸಿಕ್ಕುತ್ತದೆ. ಇದರ ಪ್ರಕಾರ ದ್ರಾವಿಡ ದೇವತೆಗಳೆಲ್ಲವೂ ಉಗ್ರ ಸ್ವಭಾವದವರೇ ಆಗಿದ್ದು, ಮಾರಮ್ಮನ ರೂಪ ಗುಣಗಳನ್ನೇ ಹೊಂದಿರುವುದು ಗೋಚರವಾಗುತ್ತದೆ.

**ಪುರಾಣಗಳು**

ಜಾತಿಯಲ್ಲಿ ಬ್ರಾಹ್ಮಣಳಾದ ಮಾರಮ್ಮ ವಿವಾಹ ಪೂರ್ವದಲ್ಲೇ ಋತುಮತಿಯಾದಳು. ಆದ್ದರಿಂದಲೇ ಅಂದಿನ ಸಂಪ್ರದಾಯದಂತೆ ಅವಳನ್ನು ಕಣ್ಣುಕಟ್ಟಿ ಕಾಡಿಗೆ ಬಿಟ್ಟು ಬಂದರು. ಆವಾಗ ಸಮಗಾರನೊಬ್ಬ

ಅವಳನ್ನು ನೋಡಿ ತಾನು ಬ್ರಾಹ್ಮಣನೆಂದು ಹೇಳಿ ಮದುವೆಯಾದನು. ಅವರಿಗೊಬ್ಬ ಮಗ ಜನಿಸುತ್ತಾನೆ. ಆತನು ಬೆಳೆದು ದೊಡ್ಡವನಾಗಿ ತನ್ನ ತಂದೆಯನ್ನು ಹಿಂಬಾಲಿಸಿ ಹೋಗಿ, ತಂದೆಯೂ ಮಾಡುತ್ತಿದ್ದ ಕುಲ ಮೂಲ ಕಸುಬನ್ನು ಕಲಿತು ತಾನೂ ಕೂಡ ಅದನ್ನು ಮಾಡಲು ಪ್ರಾರಂಭಿಸಿದನು. ಇದನ್ನು ನೋಡಿದ ಅವನ ತಾಯಿಗೆ ತನ್ನ ಪತಿಯ ಮೂಲ ಜಾತಿ ಗೊತ್ತಾಗಿ ಚಂಡಿಯಾಗುತ್ತಾಳೆ. ಆನಂತರ ಆಕೆಯು ಕೈಲ್ಲೊಂದು ಪೊರಕೆ ಹಿಡಿದುಕೊಂಡು ಮೋಸ ಮಾಡಿದ ಪತಿ ಮತ್ತು ಮಗನನ್ನು ಅಟ್ಟಿಸಿಕೊಂಡು ಹೋಗುತ್ತಾಳೆ. ಓಡುತ್ತಿದ್ದ ಪತಿಯು ಗಂಡು ಕೋಣವೊಂದನ್ನು ಕಂಡು ಅದರೊಳಗೆ ಪ್ರವೇಶಿಸಬಿಟ್ಟನು. ಅಪ್ಪನ ಹಿಂದೆ ಓಡುತ್ತಿದ್ದ ಮಗನಿಗೆ ಕೂಡ ಮೇಯುತ್ತಿದ್ದ ಕುರಿಯ ಹೊಟ್ಟೆಯಲ್ಲಿ ತೂರಿಕೊಂಡು ಬಿಟ್ಟನು. ಇದನ್ನು ನೋಡಿದ ಆ ಮಾರಮ್ಮ **'ನೀನು ಕೋಣನೊಳಗೆ ಹೋದ್ರೇನೂ, ನಿನ್ನ ಶಿರಹೊಡೆಸಿ ಖಂಡ ಕಿತ್ತು ದೀಪ ಹಚ್ಚಿಕೊಂಡು ಮೆರೆದಿದ್ರೆ ನಾನು ನಮ್ಮಪ್ಪನ್ಗೆ ಮಗಳೇ ಅಲ್ಲಾ'** ಎನ್ನುವ ಮಾತನ್ನು ಆಡುತ್ತಾಳೆ. ಕುಲ ಮೂಲ ವೃತ್ತಿಯ ಕಾರಣದಿಂದ ಜಾತಿ ಬಹಿರಂಗಗೊಂಡಿದ್ದನ್ನು ಇಲ್ಲಿ ಕಾಣುತ್ತೇವೆ. ಕೆಲವರ ಪ್ರಕಾರ ಬ್ರಾಹ್ಮಣ ತರುಣಿ ಆತ್ಮಹತ್ಯೆ ಮಾಡಿಕೊಳ್ಳದೇ ಕಾಡು ಸೇರಿದಳು ಎಂದು ನಂಬಲಾಗಿದೆ.

ಚಂಡಿಯಾದಂಥ ಮಾರಮ್ಮನ ಮೂಲ ಹೆಸರು ಬಾಲಗೌರಿ. ಹುಟ್ಟಿದ್ದು ಬ್ರಾಹ್ಮಣರ ಮನೆಯಲ್ಲಿ ತಂದೆ ತಾಯಿಗಳಿಗೆ ಒಬ್ಬಳೇ ಮುದ್ದಿನ ಮಗಳು. ಮನೆಬಿಟ್ಟು ಬಂದ ಒಬ್ಬ ಹುಡುಗ ಬ್ರಾಹ್ಮಣನಂತೆ ನಂಬಿಸಿ ಬಾಲಗೌರಿಯ ಮನೆಯನ್ನು ಸೇರಿಕೊಂಡ. ತನ್ನ ಹೆಸರನ್ನು ಕರಿಯಂಭಟ್ಟನೆಂದು ಕರೆದುಕೊಂಡನು. ಅವರಿಗೆ ಯಾವುದೇ ರೀತಿಯಲ್ಲಿ ಸಂಶಯ ಬಂದಂತೆ ಇರತೊಡಗಿದ. ಹುಡುಗನ ನಡತೆ ಮೆಚ್ಚುಗೆಯಾಗಿ ಹುಡುಗಿ ಪ್ರೀತಿಸಿ ವಿವಾಹವಾದಳು. ಆದರೆ ಬಹಳಷ್ಟು ದಿನಗಳು ಕಳೆದ ಮೇಲೆ ಕರಿಯಂಭಟ್ಟನ ತಾಯಿ ಮಗನನ್ನು ಹುಡುಕುತ್ತಿರುವ ವಿಚಾರವನ್ನು ಕರಿಯಂಭಟ್ಟನ ಜೊತೆ ಹೇಳಿದಾಗ ತಾನೇ ಅವನು ಎಂದು ಹೇಳಿದ. ಆಕೆ ಅಗಲಿದ ಮಗನನ್ನು ಕಂಡು ಆನಂದದಿಂದ ಕಣ್ಣೀರಿಟ್ಟಳು. ಮಗ ತಾಯಿಯನ್ನು ತನ್ನ ಮನೆಗೆ ಕರೆದುಕೊಂಡು ಹೋಗುವ ಮೊದಲೇ ಬ್ರಾಹ್ಮಣತಿಯಂತಿರಬೇಕು ಬುದ್ಧಿ ಹೇಳಿದನು. ವೇಷ ಬದಲಿಸಿ ಕರೆದುಕೊಂಡು ಹೋಗಿ ಊಟ ಮಾಡುವಾಗ ಊಟದ ರುಚಿ ಹೇಗಿದೆ ಎಂದು ತನ್ನ ತಾಯಿಯನ್ನು ಕೇಳಿದಾಗ ಆಕೆ 'ನಮ್ಮದೊಂದು ಕೋಣನ ಕರುವಿನ ಕಾಲಿನ ರುಚಿಯಿಲ್ಲ' ಎಂದು ಖಡಾಖಂಡಿತವಾಗಿ ನುಡಿದು ಬಿಟ್ಟಳು. ಅಪರೂಪವಾಗಿ ಬಂದ ಅತ್ತೆಗೆ, ಊಟ ಬಡಿಸುತ್ತಿದ್ದ ಬ್ರಾಹ್ಮಣ ಮೂಲದ ಬಾಲಗೌರಿಗೆ ಈ ಮಾತನ್ನು ಕೇಳಿ ಬೆಂಕಿಯನ್ನು ತುಳಿದಂತಾಯಿತು. ನೇರವಾಗಿ ತಂದೆ–ತಾಯಿಗಳ ಬಳಿಗೆ ಹೋಗಿ 'ನಾಯಿ ಮುಟ್ಟಿದ ಮಡಕೆಯನ್ನು ಏನು ಮಾಡಬೇಕೆಂದು ಕೇಳಿದಾಗ, ನಾಯಿ ಕೊರಳಿಗೆ ಕಟ್ಟಬೇಕೆಂದರು'. ಆತ ವಂಚಿಸಿ ಮಾಡಿದ ತಪ್ಪಿಗಾಗಿ ಬಾಲಗೌರಿ ಬೆಂಕಿಗೆ ಆಹುತಿಯಾದಳು. ದೇಹತ್ಯಾಗ ಮಾಡುವ ಮೊದಲೇ ತನಗೆ ಮೋಸ ಮಾಡಿ ವಿವಾಹವಾಗಿದ್ದು ಕುಲಹೀನ ಪತಿಗೆ 'ನಾನು ಮಾರಿಯಾಗಿ ಹುಟ್ಟುತ್ತೇನೆ, ನೀನು

ಪಟ್ಟದ ಕೋಣವಾಗಿ ಹುಟ್ಟು, ಮಟ್ಟ ಮಂಗಳವಾರ ಸರಿ ರಾತ್ರಿಗೆ ನಿನ್ನ ಬಲಿ ತೆಗೆದುಕೊಳ್ಳುತ್ತೇನೆ' ಎಂದು ಹೇಳಿ ಕೆಂಡಕೊಂಡವಾದಳು. ಅನಂತರದ ಬೆಳವಣಿಗೆಯಲ್ಲಿ ಬಾಲಗೌರಿಯೂ ಮಾರಮ್ಮನಾಗಿ ಹುಟ್ಟಿದಳು. ಕರಿಯಂಭಟ್ಟನು ಅವಳ ಶಾಪದಿಂದ ಕೊಣವೇಗೌಡನ ಮನೆಯಲ್ಲಿ ಪಟ್ಟದ ಕೋಣವಾಗಿಯೇ ಹುಟ್ಟಿದನು. ಕೋಣ ಚೆನ್ನಾಗಿ ಮೇಯ್ದು ವಯಸ್ಸಿಗೆ ಬಂತು. ಮಾರಿಯ ಕಣ್ಣು ಕೋಣದ ಮೇಲೆ ಬಿತ್ತು, ಮಾರಿ ಗೌಡನಿಗೆ ಕೋಣವನ್ನು ಬಲಿಕೊಡು ಎಂದು ಪೀಡಿಸಿದಳು. ಗೌಡ ಅದಕ್ಕೆ ಲಕ್ಷ್ಯವೀಯದೇ ಅವಳಿಗೆ ಏಳು ಜೊತೆ ಸೀರೆ ಉಡಿಸಿ, ಊರ ಮುಂದಲ ಕಂಬಕ್ಕೆ ಕಟ್ಟಿಸಿ ಎಣ್ಣೆ ಸುರಿಸಿ ಬೆಂಕಿ ಹಚ್ಚಿಸಿದರೂ ಬೇಯಲಿಲ್ಲ. ಗೌಡನಿಗೆ ಬೆಂಕಿ ಹೊತ್ತಿಸಿ ಕೊಂಡಂತಾಯಿತು. ವಿವೇಕ ಮೂಡಿ ಕೋಣವನ್ನು ಬಲಿಕೊಡುವುದಾಗಿ ಒಪ್ಪಿಕೊಂಡನು.

ಶೂದ್ರನೆಂದು ತಿಳಿಯದೆ ಮದುವೆಯಾಗಿ ಮಕ್ಕಳನ್ನು ಪಡೆದಿದ್ದ ಒಬ್ಬ ಬ್ರಾಹ್ಮಣ ಯುವತಿ ಒಮ್ಮೆ ತಮ್ಮ ಮನೆಯ ಹಿತ್ತಲಿನಲ್ಲಿ ಬಾಳೆಪಟ್ಟೆಯಿಂದ 'ಎಕ್ಕಡ' ಹೊಲೆಯುತ್ತಿರುವ ಮಗನನ್ನು ನೋಡುತ್ತಾಳೆ. ಆಶ್ಚರ್ಯ, ಅನುಮಾನ, ಜಿಗುಪ್ಸೆಯಿಂದ ಮಗನನ್ನು ವಿಚಾರಿಸಿದಾಗಲ 'ಅಪ್ಪಾ ದಿನಾ ಮಾಡುವುದು ಇದೇ ಕೆಲಸ, ನಾನೂ ಅದನ್ನೇ ಕಲಿಯುತ್ತಿದ್ದೇನೆ' ಅನ್ನುತ್ತಾನೆ. ಹೀಗಾಗಿ ತನ್ನ ಪತಿ ಬ್ರಾಹ್ಮಣನಲ್ಲ, ಮೆಟ್ಟು ಹೊಲಿಯುವ ಜಾತಿಗೆ ಸೇರಿದವನು ಎಂದು ನಿರ್ಧರಿಸುತ್ತಾಳೆ. ಮೋಸದಿಂದ ತಾನು ಜಾತಿ ಭ್ರಷ್ಟಳಾದ ಬಗ್ಗೆ ಕೋಪಗೊಂಡ ಆ ಬ್ರಾಹ್ಮಣ ಕುಲದ ಮಹಿಳೆಯೂ ಮಗನನ್ನು ಹಿಡಿದು ಬಡಿಯಲು ಮುಂದಾಗುತ್ತಾಳೆ. ತಾಯಿಯ ರೌದ್ರವತಾರಕ್ಕೆ ಹೆದರಿದ ಹುಡುಗ ತಪ್ಪಿಸಿಕೊಂಡು ಓಡುತ್ತಾನೆ. ಕೂಡಲೇ ಕಲ್ಲೊಂದನ್ನು ತೆಗೆದು ಅವನೆಡೆಗೆ ಎಸೆಯುತ್ತಾಳೆ. ಅದು ಹುಡುಗನ ತಲೆಗೆ ಬಡಿಯುತ್ತದೆ. ತಲೆ ಒಡೆದು ರಕ್ತ ಸೋರುತ್ತಿದ್ದರೂ ಪ್ರಾಣಭಯ ದಿಂದ ಓಡಿ ಹೋಗಿ ಎತ್ತಲೂ ತಲೆ ಮರೆಸಿಕೊಳ್ಳುತ್ತಾನೆ. ಮಗನನ್ನು ಕಾಣದ ಇವಳು ಅದೇ ಅವೇಶದಲ್ಲಿ ತನ್ನ ಪತಿಯನ್ನು ಅರಸಿ ಹೊರಡುತ್ತಾಳೆ. ಇವಳ ಬರುವಿಕೆಯನ್ನು ನೋಡಿ ಭೀತಿಗೊಂಡ ಅವನು ಓಡಿ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ಕೆದರಿದ ತಲೆ, ಉರಿಗಣ್ಣು– ಹೀಗೆ ಭಯಂಕರವಾಗಿ ಕಾಣುತ್ತಿದ್ದ ಇವಳು ಎಲ್ಲಿ ಹೊಕ್ಕರೂ ಬಿಡದಂತೆ ಕಾಣುವುದಿಲ್ಲ. ದಾರಿ ಕಾಣದೇ ಅವನು ಕೋಣನ ಹೊಟ್ಟೆಯೊಳಗೆ ಹೋಗಿ ಸೇರಿಕೊಳ್ಳುತ್ತಾನೆ. ಅವಮಾನ, ನಿರಾಶೆ, ದುಃಖಗಳಿಂದಾಗಿ ಅವಳು ಊರಿಗೆ ಹಿಂದಿರುಗುವುದಿಲ್ಲ. ತನ್ನ ಮಗ ಮತ್ತು ಪತಿಯನ್ನು ಕಳೆದುಕೊಂಡಿದ್ದು ಅಲ್ಲದೇ ತವರನ್ನು ಮರೆತು ಹೇಗೂ ಒಂದೆಡೆ ಕಾಲ ಕಳೆಯುತ್ತಿರುತ್ತಾಳೆ. ಕೆಲವು ವರ್ಷಗಳ ಆನಂತರ ಒಂದು ದಿನ ಸಂಜೆ ಮುತ್ತು–ರತ್ನಗಳನ್ನು ಮಾರುತ್ತಾ ಯಾರೋ ಒಬ್ಬ ಯುವಕ ಇವಳ ಮನೆಯ ಕಡೆಗೆ ಬರುತ್ತಾನೆ. ಆ ಯುವಕನನ್ನು ಕಂಡಕೂಡಲೇ ಇವಳ ಮನಸ್ಸು ಚಂಚಲವಾಗುತ್ತದೆ. ಹತ್ತಾರು ವರ್ಷಗಳಿಂದ ಅದುಮಿಟ್ಟುಕೊಂಡಿದ್ದ ಆಸೆ–ಆಕಾಂಕ್ಷೆಗಳು ಒಮ್ಮೆಲೇ ಕೆರಳುತ್ತವೆ. ಯಾಕೊ ಏನೂ ಕ್ಷಣಾರ್ಧದಲ್ಲಿ ಆ ಯುವಕನಲ್ಲಿ ಆಕರ್ಷಿತಳಾಗುತ್ತಾಳೆ. ಅವನೊಡನೆ ಯಾವುದೋ ಸಂಬಂಧ ಬಲವಾಗಿ ಕಾಡಿದಂತಾಗುತ್ತದೆ. ಕೊನೆಗೆ ಸಂಜೆಯ ನೆಪವೊಡ್ಡಿ ತನ್ನ ಮನೆಯಲ್ಲೇ

ಆ ರಾತ್ರೀ ಉಳಸಿಕೊಳ್ಳುತ್ತಾಳೆ. ತನ್ನ ಹತ್ತಾರು ವರ್ಷದ ಕಾಮದಾಹ ಈ ಯುವಕನಿಂದ ಆ ರಾತ್ರಿ ತೀರುತ್ತದೆ. ಬೆಳಗ್ಗೆ ಬೇಗ ಎದ್ದು ಸ್ನಾನ ಮಾಡುವಾಗ ಅವನ ಬೆನ್ನು ತಲೆಗಳನ್ನು ಉಜ್ಜುತ್ತಾಳೆ. ಅವನ ತಲೆಯ ಮೇಲೆ ಯಾವುದೋ ಗಾಯದಿಂದಾಗಿ ಕೂದಲೂ ಬೆಳೆಯದೇ ಇರುವುದನ್ನು ಗಮನಿಸುತ್ತಾಳೆ. ತಟ್ಟನೆ ತನ್ನ ಮಗನ ನೆನಪು ಬರುತ್ತದೆ. ಆಗ ಈ ಗಾಯ ಹೇಗಾಯಿತು? ಏಕಾಯಿತು? ಎಂದು ವಿಚಾರಿಸುತ್ತಾಳೆ. ಅವನು ಹಿಂದಿನದೆಲ್ಲವನ್ನೂ ವಿವರವಾಗಿ ಹೇಳುತ್ತಾನೆ. ಎಲ್ಲವನ್ನು ಕೇಳದಾಗ ಇವನೇ ತನ್ನ ಮಗನೆಂದು ತಿಳದು ಹೋಗುತ್ತದೆ. ಜಾತಿ ಭ್ರಷ್ಟಳಾಗಿದ್ದಲ್ಲದೇ ತನ್ನ ಮಗನನ್ನೇ ತಾನು ಕೂಡಿದ ಪಾಪಿಯಾದನಲ್ಲ ಎಂಬ ಜಿಗುಪ್ಸೆಯಿಂದ ಸಾಯಲು ನಿರ್ಧರಿಸುತ್ತಾಳೆ. ಆತ್ಮರ್ಪಣೆಗೆ ಮುನ್ನ ಇಷ್ಟಕ್ಕೆಲ್ಲಾ ಕಾರಣನಾದ ಕೋಣನ ರೂಪದ ತನ್ನ ಪತಿಯನ್ನು ಮಾರಿಯಾಗಿ ಜನ್ಮ ತಳೆದು ಬಲಿ ತೆಗೆದುಕೊಳ್ಳುವುದಾಗಿ ಶಪಥ ಮಾಡಿ ಬೆಂಕಿಗೆ ಹಾರುತ್ತಾಳೆ. ಆನಂತರ ಮಾರಿಯಾಗಿ ಹುಟ್ಟಿ ಕೋಣವನ್ನು ಬಲಿ ತೆಗೆದುಕೊಳ್ಳುತ್ತಾಳೆ.

ಮರದ ಕೆಲಸ ಮಾಡುತ್ತಿದ್ದ ಆಚಾರಿಯ ಮನೆ ಮುಂದೆ 6 ವರ್ಷದ ಹುಡುಗಿಯೊಬ್ಬಳು ರಾತ್ರಿಯಲ್ಲಿ ಬಂದು ಕುಳತಿದ್ದಳು. ಮಾರನೆಯ ದಿನ ಬೆಳಗ್ಗೆ ಆ ಆಚಾರಿಯ ಮನೆಯವರು ಬಾಗಿಲು ತೆರೆದಾಗ ಆ ಹುಡುಗಿಯನ್ನು ಕಂಡು ಗಾಬರಿಯಿಂದ ನೀನು ಯಾರು? ಎಂದು ಪ್ರಶ್ನೆ ಮಾಡಿದಾಗ ಆ ಹುಡುಗಿಯು ನಾನು ಬ್ರಾಹ್ಮಣರ ಹುಡುಗಿ. ನನಗೆ ತಂದೆ ತಾಯಿ ಯಾರೂ ಇಲ್ಲ ಎಂದು ಹೇಳದಳು. ಈ ಮಾತನ್ನು ಕೇಳದ ಆಚಾರಿಯ ಮನೆಯವರಿಗೆ ಆಕೆಯ ಮೇಲೆ ಕನಿಕರ ಮೂಡಿ ತಮ್ಮ ಮನೆಗೆ ಸೇರಿಸಿಕೊಳ್ಳುತ್ತಾರೆ. ಹೀಗೆ ಕಾಲಕಳೆಯುತ್ತಿರುವಾಗ ಈ ಹುಡುಗಿಯು ಒಬ್ಬ ಕೆಳವರ್ಗದ ಹುಡುಗನೊಬ್ಬನನ್ನು ಪ್ರೀತಿಸುತ್ತಾಳೆ. ಆಚಾರಿಯ ಮನೆಯವರು ಆಕೆಯ ಪ್ರೇಮಕ್ಕೆ ಒಪ್ಪಿಗೆ ನೀಡಿ ಅವರಿಬ್ಬರಿಗೂ ಮದುವೆ ಮಾಡಿಸಿಕೊಂಡು ಬರುತ್ತಾರೆ. ತದನಂತರ ಹುಡುಗ ತನ್ನ ಮನೆಗೆ ಕರೆದುಕೊಂಡು ಬರುತ್ತಾನೆ. ಆ ಹುಡುಗನು ತಾನು ಬ್ರಾಹ್ಮಣನೆಂದು ಸುಳ್ಳು ಹೇಳ ಆಕೆಯನ್ನು ಮದುವೆ ಮಾಡಿಕೊಂಡಿರುತ್ತಾನೆ. ಆ ಹುಡುಗನ ಮನೆಯಲ್ಲಿ ಒಂದು ಕೋಣೆಗೆ ಯಾವಾಗಲೂ ಬೀಗ ಹಾಕಿರುವುದನ್ನು ಕಂಡು ಆಕೆಯು ಕುತೂಹಲದಿಂದ ಒಂದು ದಿನ ತನ್ನ ಗಂಡ ಮನೆ ಬಿಟ್ಟು ಹೊರಗೆ ಹೋಗಿರುವುದನ್ನು ತಿಳದು ಆ ಕೋಣೆಯ ಬೀಗವನ್ನು ಒಡೆದು ಒಳಗೆ ಪ್ರವೇಶಿಸುತ್ತಾಳೆ. ಆ ಕೋಣೆಯ ಒಳಗೆ ಒಂದೆರಡು ದನದ ಚರ್ಮ ನೇತು ಹಾಕಿರುವುದನ್ನು ಮತ್ತೊಂದೆಡೆ ಡೋಲಿನ ಸಾಮಾನನ್ನು ನೇತು ಹಾಕಿರುವುದನ್ನು ಕಂಡು ಗಾಬರಿಯಾಗಿ ತನ್ನ ಪತಿಯು ಬ್ರಾಹ್ಮಣನಾಗಿದ್ದರೆ, ಈ ಚರ್ಮಗಳನ್ನು ಏಕೆ ಇಟ್ಟುಕೊಳ್ಳುತ್ತಿದ್ದ ಎಂದು ತನ್ನಲ್ಲಿಯೇ ಪ್ರಶ್ನೆ ಮಾಡಿಕೊಂಡು ಪತಿಯು ಮನೆಗೆ ಬಂದಾಗ ಈ ವಿಷಯದ ಬಗ್ಗೆ ಕೇಳುತ್ತಾಳೆ. ಆಗ ಅವನು ನಾನು ಕೊರವರ ಜಾತಿಯವನೆಂದು ಸತ್ಯ ಹೇಳುತ್ತಾನೆ. ಈ ಮಾತನ್ನು ಕೇಳದ ಅವಳು ಬೇಸತ್ತು ಬೆಂಕಿ ಹಚ್ಚಿಕೊಂಡು ಸಾಯುತ್ತಾಳೆ. ಈಕೆಯೇ

ಮುಂದಿನ ಜನ್ಮದಲ್ಲಿ ಮಾರಿಯಾಗಿ ಹುಟ್ಟುತ್ತಾಳೆ. ಹಾಗೆಯೇ ಆಕೆಯ ಪತಿಯೂ ಕೋಣವಾಗಿ ಹುಟ್ಟುತ್ತಾನೆ ಎಂದು ನಮ್ಮ ಜನಪದರು ಹೇಳುತ್ತಾರೆ. ಆದ್ದರಿಂದಲೇ ಮಾರಮ್ಮನನ್ನು ಶಾಂತಿಪಡಿಸಲು ಕೋಣ, ಮೇಕೆ, ಕುರಿ, ಕೋಳಿಗಳನ್ನು ಬಲಿಕೊಡುತ್ತಾರೆ ಎಂದು ನಂಬಿದ್ದಾರೆ.

ಪುರಾಣ ಕಥೆಗಳಲ್ಲಿ ಮಾರಮ್ಮ ಉಚ್ಚ ಕುಲದವಳೆಂದೂ, ಆಕೆಯ ಪತಿಯೂ ಮಾತ್ರ ಕೆಳಜಾತಿಯವನೆಂದೂ, ಈತ ಸುಳ್ಳು ಹೇಳಿ ಆಕೆಯನ್ನು ವಿವಾಹವಾದನೆಂದು ಪ್ರಸ್ತಾಪಗೊಂಡಿದೆ. ಈ ನಿಜಾಂಶವನ್ನು ತಿಳಿದ ಆನಂತರ ಬ್ರಾಹ್ಮಣ ಕನ್ಯೆ ತನ್ನ ಪತಿ ಮತ್ತು ಮಕ್ಕಳನ್ನು ಕೊಂದಳು ಅಥವಾ ಪ್ರಾಣಿಗಳ ರೂಪದಲ್ಲಿ ಬಲಿ ತೆಗೆದುಕೊಂಡಳು ಎಂಬುದು ಕೆಲವು ವಿವಾದಕ್ಕೆ ಎಡೆ ಮಾಡಿಕೊಡುತ್ತದೆ.

**ಮಾರಮ್ಮನ ಐತಿಹ್ಯಗಳು** :

ಸಂಸ್ಕೃತಿ ಹಾಗೂ ಜಾನಪದ ಚಿಂತಕರಲ್ಲಿ ಒಬ್ಬರಾದಂಥ ಪ್ರೊ. ಹಿ.ಚಿ. ಬೋರಲಿಂಗಯ್ಯ ಅವರು ಮಾರಮ್ಮನನ್ನು ಹೀಗೆ ಗುರುತಿಸಿದ್ದಾರೆ. ಸಾಮಾನ್ಯವಾಗಿ ಅನೇಕರು ಮಾರಮ್ಮನ ಪ್ರತಿರೂಪವನ್ನು ಮರ ದಿಂದ ಕೆತ್ತಿರುತ್ತಾರೆ ಅಥವಾ ಒಂದು ಮರದ ತುಂಡನ್ನು ನೆಟ್ಟಿರುತ್ತಾರೆ. ಅದೇ ರೀತಿ ಕಲ್ಲುಗಳನ್ನು ಸ್ತ್ರೀರೂಪವನ್ನು ಕೆತ್ತಿರುವುದು ಅಥವಾ ಕಲ್ಲನ್ನು ನೆಟ್ಟಿರುವುದೂ ಇದೆ. ಇಲ್ಲಿ ಮಾರಮ್ಮನೆಂಬುದು ಕೇವಲ ವೃಕ್ಷದೇವತೆ ಸಸ್ಯ ಸಂರಕ್ಷಣೆ ಎಂದು ವ್ಯಾಖ್ಯಾನಿಸಿ ಸ್ತ್ರೀ ದೇವತೆಯನ್ನು ಕಾಡಿಗೆ ಅಲ್ಲದೇ ಬುಡಕಟ್ಟು ಜನರ ಸಂಸ್ಕೃತಿಗೆ ಸೀಮಿತಗೊಳಿಸಿದಂತಾಗುತ್ತದೆ. ಅಲ್ಲದೇ ಮಾರಮ್ಮ ಪದ ಕೇವಲ ಮರದಮ್ಮ ಎಂಬುದರಿಂದ ಮಾತ್ರ ಹುಟ್ಟಿದೆ ಎಂಬುದು ಸೂಕ್ತವಲ್ಲ. ಆದ್ದರಿಂದ ಮಾರಮ್ಮ ದೇಶಿ ಸಂಸ್ಕೃತಿಯಿಂದ ಹುಟ್ಟಿದ ಎಂಬುದು ಗೊತ್ತಾಗುತ್ತದೆ.

ಡಾ. ಸಿದ್ಧಲಿಂಗಯ್ಯ ಅವರು ಮಾರಮ್ಮನನ್ನು ಕುರಿತು ಈ ರೀತಿ ಹೇಳುತ್ತಾರೆ. “ದೇಶಿ ಜನರಲ್ಲಿ ವಿಶೇಷವಾಗಿ ಮಹಿಳೆಯರ ಅಸಹಜ ವಿಚಿತ್ರ ರೀತಿಯ ಸಾವು, ಭಯ, ಭೀತಿ ಹುಟ್ಟಿಸುತ್ತದೆ. ಅಂಥವರು ಪ್ರೇತಾತ್ಮಗಳಾಗಿ ಜನರನ್ನು ಕಾಡುತ್ತಾರೆ. ಅಂಥವರಿಗೆ ಶಾಂತಿ ಕಾರ್ಯ ಮಾಡಬೇಕೆಂದು ನಂಬುತ್ತಾರೆ. ಇಂಥವರಿಗೆ ಮಾಡಲಾಗುವ ಭೂಶಾಂತಿ ಕ್ರಿಯೆಗಳು ಕ್ರಮೇಣ ಈ ಮಾರಿ ದೇವತೆಯ ಕಲ್ಪನೆ ಮತ್ತು ಮಾರಿಹಬ್ಬದ ಹುಟ್ಟಿಗೆ ಪ್ರೇರಣೆಗಳಾಗುತ್ತವೆ”.

ಮಾರಮ್ಮನ ಮೂಲವನ್ನು ಮಾಸ್ತಿ ಮೂಲ ಎಂದು ಹಲವು – ಹತ್ತು ವಿದ್ವಾಂಸರು ಗುರುತಿಸಿದ್ದಾರೆ. ಹಿಂದಿನ ಕಾಲದಲ್ಲಿ ಮಹಿಳೆಯರು ತಮ್ಮ ಪತಿಯಂದಿರು ಮರಣ ಹೊಂದಿದರೆ, ರಣರಂಗದಲ್ಲಿ ಪ್ರಾಣವನ್ನು

ಕಳೆದುಕೊಂಡರೆ ಅಥವಾ ಯಾರಾದರೂ ದುಷ್ಟವ್ಯಕ್ತಿಗಳಿಂದ ಅಕ್ರಮವಾಗಿ ತಮ್ಮ ಶೀಲವನ್ನು ಕೆಡಿಸಲು ಬಂದಾಗ ತಮ್ಮ ಪ್ರಾಣಕ್ಕಿಂತ ಮಾನವೇ ಹೆಚ್ಚು ಎಂದುಕೊಂಡಿರುವ ದೇಶಿ ಮಹಿಳೆಯರು ತನ್ನ ಪತಿಯ ಜೊತೆಯಲ್ಲಿಯೇ ಚಿತೆಯೇರುತ್ತಿದ್ದರು. ಗ್ರಾಮಗಳಲ್ಲಿನ ಕೆರೆ, ಕಟ್ಟೆ, ಬಾವಿ, ಕೋಟೆಗಳ ಸುಭದ್ರತೆಗೆ ಅನೇಕ ಸಂದರ್ಭಗಳಲ್ಲಿ ನರಬಲಿ ಅರ್ಪಿಸುವ ಪದ್ಧತಿ ಇತ್ತು. ಅದರಲ್ಲೂ ಕೆಲವು ವಿಶೇಷ ಸಂದರ್ಭಗಳಲ್ಲಿ ಸ್ತ್ರೀಯರನ್ನು ಅರ್ಪಿಸುವುದು ವಾಡಿಕೆ.

**ಉದಾ**: ಕೆರೆಗೆ ಹಾರವಾದ ಭಾಗಿರಥಿಯಂತೆ, ಅಂಥ ಸಂದರ್ಭದಲ್ಲಿ ಅನೇಕ ಮಹಿಳೆಯರು ಊರಿನ ಜನತೆಯ, ಸಮಾಜದ ಹಿತಕ್ಕಾಗಿ ತಮ್ಮನ್ನು ತಾವು ಬಲಿಕೊಟ್ಟು ಪ್ರಾಣತ್ಯಾಗ ಮಾಡಿದ್ದಾರೆ. ಇಂಥ ಪತಿವ್ರತೆಯರು, ಪವಿತ್ರರೂ ಆದ ಅನೇಕರನ್ನು ಮಾಸ್ತಿ, ಮಹಾಸತೀ ಎಂದೂ ಕೂಡ ಕರೆಯಲಾಗಿದೆ. ಇಂಥ ಮಾಸ್ತಿ, ಮಹಾಸತಿಯವರು ಅನೇಕ ಗ್ರಾಮಗಳಲ್ಲಿ ಮಾರಮ್ಮನಾಗಿರುವುದು ತನ್ನ ಸಂಸ್ಕೃತಿ ಹಾಗೂ ಜನಪದೀಯ ಅಧ್ಯಯನಗಳಿಂದ ತಿಳಿದುಬರುತ್ತದೆ. ಜೊತೆಗೆ ಮಾರಿ, ಮಾರಮ್ಮ ಎಂಬ ಪದಗಳಿಗೆ ಮಾತೃದೇವತೆ, ಮಾಸ್ತಮ್ಮ ಎಂಬ ಪದಗಳು ಮೂಲವೆಂದು ಹಲವು – ಹತ್ತು ಪ್ರಜ್ಞಾ ಮಹಾಶಯರು ಹೇಳುತ್ತಾರೆ. ಅಂದರೆ ಗ್ರಾಮದಲ್ಲಿ ಸರಿಯಾದ ಕಾಲಕ್ಕೆ, ಮಾರಮ್ಮನನ್ನು ಪೂಜಿಸದಿದ್ದರೆ, ಊರಿಗೆ ಕೆಟ್ಟದ್ದನ್ನು, ರೋಗ ರುಜಿನಗಳನ್ನು ಉಂಟು ಮಾಡುತ್ತಾಳೆಂದು ಜನಪದರು ಹೇಳುತ್ತಾರೆ. ಮೊದಮೊದಲು ಊರಿನ ಹೊರಭಾಗದಲ್ಲಿ ಕಂಡುಬರುತ್ತಿದ್ದ ಮಾರಮ್ಮನ ದೇವಾಲಯಗಳು ಜನಸಂಖ್ಯೆ ಹೆಚ್ಚಾದಂತೆ ಊರಿನ ಒಳಭಾಗಕ್ಕೆ ಸೇರಿಕೊಳ್ಳುತ್ತಿವೆ. ಆದಿ ಮಾನವನು ಕಾಡಿನಲ್ಲಿ ಯಾವಾಗಲೂ ಬೇಟೆಯಾಡುವುದರಲ್ಲಿ ಗೆಡ್ಡೆ–ಗೆಣಸು ಸಂಗ್ರಹಿಸುವುದರಲ್ಲಿ ಕಾಲ ಕಳೆಯುತ್ತಿದ್ದನು. ಮನೆಯಲ್ಲಿದ್ದ ಮಹಿಳೆಯು ಮಕ್ಕಳಿಗೆ ಬುದ್ಧಿಕಲಿಸುವ ತಾಯಿಯಾಗಿ, ಕಾಯಿಲೆಗಳಿಂದ ರಕ್ಷಿಸುವ ವೈದ್ಯೆಯಾಗಿ, ಆಹಾರ ಧಾನ್ಯ ಉತ್ಪಾದಿಸುವ ಅನ್ನದಾತೆಯಾಗಿ ವಿವಿಧ ಪಾತ್ರಗಳನ್ನು ನಿರ್ವಹಿಸತೊಡಗಿದಳು. ಈ ಹಿನ್ನೆಲೆಯಲ್ಲಿ ಸ್ತ್ರೀಶಕ್ತಿ ಹೆಣ್ಣಿನ ಆರಾಧನೆ ಹುಟ್ಟಿಕೊಂಡಿತು. ಈ ಹೆಣ್ಣಿನ ಆರಾಧನೆ ಮಾಡಿದ್ದರಿಂದ ಮಾರಮ್ಮನ ಹಬ್ಬದ ಆಚರಣೆ ಹುಟ್ಟಿಕೊಂಡಿದೆ ಎನ್ನಬಹುದು.

**ಮಾರಮ್ಮನ ಒಂದು ಜನಪದ ಕಥೆ**

ಒಬ್ಬ ಮಾದಿಗನೊಬ್ಬ ಮಾರುವೇಷದಲ್ಲಿ ಬ್ರಾಹ್ಮಣ ಪಂಡಿತರ ಮನೆ ಸೇರಿದ. ಅವನಿಗೆ ಸನಾತನ ಧರ್ಮವನ್ನು ತಿಳಿಯಬೇಕೆಂಬ ಬಯಕೆ ಇರುತ್ತದೆ. ಬ್ರಾಹ್ಮಣ ಪಂಡಿತರ ಮನೆಯಲ್ಲಿ ಒಬ್ಬಳು ಸುಂದರ ಕನ್ಯೆ ಇದ್ದಳು. ತುಂಬಾ ನಿಷ್ಠೆಯಿಂದ ಪಂಡಿತರ ಸೇವೆಯನ್ನು ವೇಷಾಂತರದ ಮಾದಿಗ ಮಾಡಿಕೊಂಡು

ವಿದ್ಯೆಯನ್ನು ಕಲಿತ. ಮಾದಿಗ ಶಿಷ್ಯನ ಸೌಜನ್ಯ, ನಿಷ್ಠೆ, ಸೇವೆಗಳನ್ನು ಪಂಡಿತರು ಬಹಳ ಮೆಚ್ಚಿ ಸಕಲ ವಿದ್ಯೆಗಳನ್ನು ಹೇಳಿಕೊಟ್ಟರು.

ಶಿಷ್ಯನ ಪ್ರತಿಭೆಯನ್ನು ಕಂಡು ಮೆಚ್ಚಿದ ಪಂಡಿತರು ಸುಂದರಿಯಾದ ತನ್ನ ಮಗಳನ್ನು ಆತನಿಗೆ ವಿವಾಹ ಮಾಡಿಕೊಟ್ಟರು. ತದನಂತರ ಅವರ ಸಂಸಾರದಲ್ಲಿ ಮಕ್ಕಳು ಹುಟ್ಟಿದರು. ಇಷ್ಟಾಗಿ ಅವನ ಮಾದಿಗತನದ ವಾಸನೆ ಕಳೆಯಲಿಲ್ಲ. ಯಾರಿಗೂ ತಿಳಿಯದ ಹಾಗೆ ಮಕ್ಕಳನ್ನು ಕರೆದುಕೊಂಡು ಹೋಗಿ ಮಾಂಸದ ಊಟವನ್ನು ಆಗಾಗ್ಗೆ ಸೇವಿಸುತ್ತಿದ್ದ. ದಿನಕಳೆದಂತೆ ಮಾದಿಗನ ಪತ್ನಿಗೆ ಈ ದೃಶ್ಯ ಕಣ್ಣಿಗೆ ಬಿತ್ತು. ಪತಿಯ ದುರಾಚಾರ ಅವಳನ್ನು ರೊಚ್ಚಿಗೆಬ್ಬಿಸಿತು. ಆಕೆ ಮುನಿದು ಮಾರಿಯಾದಳು.

ದುರಾಚಾರದ ತನ್ನ ಮಕ್ಕಳು ಸಹಿತ ತನ್ನ ಪತಿಯನ್ನು ಕೊಂದುಬಿಡಬೇಕೆಂದು ಅವಳ ಬಗೆದಳು. ಪ್ರತೀಕಾರ ಅವಳಲ್ಲಿ ಬುಸುಗುಡತೊಡಗಿತು. ಇವಳು ಎದ್ದು ಮನೆಗೆ ಬೆಂಕಿ ಹಚ್ಚಿದಳು. ಬೆಂಕಿಯು ಧಗಿಧಗಿಸಲು ತಂದೆ ಮಕ್ಕಳು ಗಾಬರಿಯಲ್ಲಿ ಹೊರಬಂದು ನೋಡಿದರು. ಅಲ್ಲಿ ರೌದ್ರಾವತಾರ ತಾಳಿರುವ ಪತ್ನಿ ಇವರು ಬದುಕಿ ಹೊರಬಂದುದ್ದನ್ನು ಕಾಣುತ್ತಲೇ ಕಿಡಿಕಾರುತ್ತ ಅವರನ್ನು ಕೊಲ್ಲಲು ಮೇಲೇರಿ ಹೋಗತೊಡಗಿದಳು.

ಆಕೆಯ ಪತಿಯು ತಾನು ಬ್ರಾಹ್ಮಣ ಪಂಡಿತರಿಂದ ಕಲಿತ ವಿದ್ಯೆಯ ಲಾಭ ಪಡೆದು ಉಳಿದುಕೊಳ್ಳಲು ಯತ್ನಿಸಿ ಕೋಣನ ರೂಪ ತಾಳಿ ಧಾವಿಸಿದನು. ಕೋಣವನ್ನು ಹಿಡಿದುಕೊಳ್ಳಲು ಹೋದರೆ ಕುರಿಯಾದ, ಕುರಿಯನ್ನು ಕಡಿಯಲು ಹೋದರೆ ಮೇಕೆಯಾದ, ಪ್ರತಿಯೊಂದು ರೂಪದಲ್ಲೂ ಆಕೆ ಅವನನ್ನು ಕಡಿದುಕೊಂದಳು. ಇನ್ನೂ ಅದೇ ರೀತಿಯಾದಾಗ ಆಕೆ ಅವರನ್ನು ಸುಡುವ ಬೆಂಕಿಯಲ್ಲಿ ತಳ್ಳಿ ತಾನೂ ಅದೇ ಜ್ವಾಲೆಯಲ್ಲಿ ಹಾರಿಕೊಂಡು ಪ್ರಾಣವನ್ನು ಕಳೆದುಕೊಂಡಳು ಎಂಬುದು ಜನಪದರ ಮಾತು. ಒಮ್ಮೆ ಒಬ್ಬ ಬ್ರಾಹ್ಮಣ ಯುವತಿ ಮತ್ತು ಅಸ್ಪೃಶ್ಯ ವರ್ಗದ ಯುವಕರಿಬ್ಬರೂ ಒಂದೇ ಗುರುವಿನ ಹತ್ತಿರ ವಿದ್ಯಾಭ್ಯಾಸ ಮಾಡಲು ಸೇರಿದ್ದರು. ಅಸ್ಪೃಶ್ಯರ ಯುವಕನೊಬ್ಬನು ಸುಂದರನೂ, ಚತುರನೂ ಆಗಿದ್ದು ವಿದ್ಯಾಭ್ಯಾಸದಲ್ಲಿ ಪ್ರವೀಣನೆನಿಸಿಕೊಂಡಿದ್ದನು. ಈ ಗುಣಗಳಿಗೆ ಮೆಚ್ಚಿದ ಬ್ರಾಹ್ಮಣ ಯುವತಿಯು ಅವನಲ್ಲಿ ಅನುರಕ್ತಳಾದಳು. ಯುವಕನೂ ಆಕೆಯನ್ನು ಮೆಚ್ಚಿ ತಮ್ಮ ಜಾತಿಕುಲಗಳನ್ನು ವಿಚಾರಿಸದೆಯೇ ಮದುವೆಯಾಗಿಯೇ ಬಿಟ್ಟರು.

ಒಂದು ದಿನ ತನ್ನ ಸೊಸೆಯನ್ನು ಕಾಣಲು ಬಂದ ಆ ಅಸ್ಪೃಶು ಯುವಕನ ತಾಯಿ ಮತ್ತು ಸೊಸೆಯರಲ್ಲಿ ನಡೆದ ಸಂಭಾಷಣೆಯಿಂದ ಆಕೆಯ ಪತಿಯೂ ಹೊಲೆಯನೆಂದೂ ತಿಳಿಯಿತು. ಆ ತಕ್ಷಣ ಅವಳು ಅತಿಯಾದ ಕೋಪದಿಂದ ತಾನು ಬಿದ್ದ ಮೋಸಕ್ಕೆ ಶಪಿಸಿಕೊಂಡು, ಪತಿಯನ್ನು ಶಪಿಸಿ

ಆತ್ಮಹತ್ಯೆಯನ್ನು ಮಾಡಿಕೊಳ್ಳಬೇಕೆಂತಲೂ ಆನಂತರ ಪುನರ್ಜನ್ಮ ಪಡೆದು ಮಾರಿಯಾಗಿ ಹುಟ್ಟಿ ತನ್ನ ಪತಿಯೂ ಮಾಡಿದ ಮೋಸಕ್ಕೆ ಪ್ರತಿಕ್ರಮವಾಗಿ ಅವನಿಗೆ ಚಿತ್ರಹಿಂಸೆಯನ್ನು ಕೊಟ್ಟು ಬಲಿ ತೆಗೆದುಕೊಳ್ಳಬೇಕೆಂತಲೂ ತೀರ್ಮಾನಿಸಿ ಆತ್ಮಹತ್ಯೆಯನ್ನು ಮಾಡಿಕೊಂಡಳು. ಆನಂತರ ಮಾರಿಯಾಗಿ ಹುಟ್ಟಿ ಭಯಂಕರ ರೂಪವನ್ನು ತಾಳಿ ಪತಿಯನ್ನು ಹಿಡಿದು ಕೋಪಾವೇಶದಲ್ಲಿ ತನ್ನ ತೋರು ಬೆರಳಿನ ಮೇಲೆ ಸಿಕ್ಕಿಸಿಕೊಂಡು ಗಿರಗಿರನೆ ತಿರುಗಿಸಿ ಸಾಯಿಸಿದಳೆಂದು ಪ್ರತೀತಿ ಇದೆ. ಒಟ್ಟಾರೆಯಾಗಿ ಹೇಳುವುದಾದರೆ; ಸಂಪ್ರದಾಯ ರಾಷ್ಟ್ರವಾಗಿರುವ ಭಾರತದಲ್ಲಿ ಉಚ್ಛ ಜಾತಿಯ ಯುವತಿಯರು ಕೆಳಜಾತಿಯ ಯುವಕರನ್ನು ಪೀಡಿಸಿ ವಿವಾಹವಾಗಿ ಅನಂತರದಲ್ಲಿ ಆತನ ಮೂಲಕ ಜಾತಿ ತಿಳಿದಾಗ ಚಂಡಿಯಾಗಿ ಮಾರಮ್ಮಳಾಗೆ ಸೇಡನ್ನು ತೀರಿಸಿಕೊಂಡಿರುವ ಐತಿಹ್ಯಗಳೂ ಇವೆ. ಆದರೂ ಈ ನೆಲದಲ್ಲಿ ಶೂದಾತ್ರಿಶೂದ್ರರ ಕುಲ ದೇವತೆಯೇ ಈ ಮಾರಮ್ಮಳಾಗಿದ್ದಾಳೆ ಎಂಬುದನ್ನು ಅಧ್ಯಯನಗಳು ದಾಖಲಿಸಿ ಹೊರತಂದಿರುತ್ತವೆ.

**ಉಪಸಂಹಾರ** :

ಆಧುನಿಕತೆ, ವಿಜ್ಞಾನ ಹಾಗೂ ತಂತ್ರಜ್ಞಾನ ಬೆಳೆದಂತೆ ಹೋದರೂ ಸಹ ಗ್ರಾಮೀಣ ಪ್ರದೇಶದಲ್ಲಿ ಗ್ರಾಮ ದೇವತೆಗಳ ಒಲವು ಕಡಿಮೆಯಾಗಿಲ್ಲ. ಇದಕ್ಕೆ ಕಾರಣ ಗ್ರಾಮೀಣ ಪ್ರದೇಶದ ಜನಸಮುದಾಯವೂ ಗ್ರಾಮ ದೇವತೆಗಳೊಂದಿಗೆ ಹೊಂದಿರುವ ಭಾವನಾತ್ಮಕ ಹಾಗೂ ಮಾನಸಿಕ ಸಂಬಂಧವು ಗ್ರಾಮ ದೇವತೆಗಳ ಬಗ್ಗೆ ಅಚಲ ಹಾಗು ಗಟ್ಟಿಯಾದ ನಂಬಿಕೆ ಆಚರಣೆಗಳನ್ನು ಮಾಡಲು ಪೂರಕವಾಗಿವೆ ಎಂದೇ ಹೇಳಬಹುದು. ಇತ್ತೀಚಿನ ಕೆಲವು ಅಧ್ಯಯನಗಳ ಪ್ರಕಾರ, ಗ್ರಾಮೀಣ ಸಮುದಾಯದ ಜನಸಮುದಾಯಕ್ಕೆ ಭಾನುಮತಿ, ನರಬಲಿ, ಪ್ರಾಣಿಬಲಿ, ಬೆತ್ತಲೆ ಸೇವೆಯಂಥ ಪದ್ಧತಿಗಳನ್ನು ಗ್ರಾಮ ದೇವತೆಗಳ ಹೆಸರಿನಲ್ಲಿ ಸೇವೆ ಸಲ್ಲಿಸುವುದು ನಿಲ್ಲಿಸಿದ್ದರೂ ಕೂಡ ಗ್ರಾಮೀಣ ಪ್ರದೇಶದ ಜನಸಮುದಾಯ ಅವುಗಳನ್ನು ನಿಲ್ಲಿಸುತ್ತಿಲ್ಲ. ಪ್ರಗತಿಪರ ಚಿಂತಕರು ಇದರ ಬಗ್ಗೆ ಹಲವು ಹತ್ತು ಸಾಮಾಜಿಕ ಅರಿವು ಕಾರ್ಯಕ್ರಮ ಹಮ್ಮಿಕೊಂಡಿದ್ದರೂ ಸಹ ಅವುಗಳನ್ನು ತಡೆಯಲು ಆಗುತ್ತಿಲ್ಲ. ಇದನ್ನು ತಳಸ್ಪರ್ಶಿಯಾಗಿ ಗಮನಿಸಿದಾಗ, ಗ್ರಾಮ ದೇವತೆಗಳ ಬಗ್ಗೆ ಅವರ ನಿಲುವು ನಮಗೆ ಸ್ಪಷ್ಟವಾಗುತ್ತದೆ. ಗ್ರಾಮ ದೇವತೆಗಳ ಜಾನಪದೀಯ ಪಾರಂಪರಿಕ ಆಚರಣೆಗಳು ನಮಗೆ ಆ ಸಮುದಾಯದ ಸಾಂಸ್ಕೃತಿಕ ಪರಂಪರೆಯ ಆಚರಣೆಗಳು, ಸೇವೆಗಳು, ಜಾನಪದ ಶೈಲಿಯಲ್ಲಿ ದೇವತೆಗಳ ಮುಂದೆ ಪ್ರಚುರಪಡಿಸಿದಾಗ ಅದನ್ನು ಕೇಳುವುದರಲ್ಲಿ ನೋಡಿದವರಲ್ಲಿ ಭಯ, ಭಕ್ತಿ ಮೂಡುತ್ತದೆ. ಜೊತೆಗೆ ನಾವು ದೋಷ ದಾರಿಗಳನ್ನು ಹಿಡಿಯಬಾರದು ಕೆಳ ಸಮುದಾಯ ಶೋಷಿತ ವರ್ಗ ಬಡ ಜನರ ನಿರ್ಗತಿಕರ ಶೋಷಣೆ ಮಾಡಬಾರದು ಎಂದು ತಿಳಿಸುತ್ತದೆ. ಜೊತೆಗೆ ಒಂದು ವೇಳೆ ಶೋಷಿಸಿದರೆ ಅದಕ್ಕೆ ತಕ್ಕ ಪ್ರತಿಫಲ ಗ್ರಾಮ ದೇವತೆ ನೀಡುತ್ತಾಳೆ. ಶೋಷಣೆಗೆ ಒಳಪಡಿಸಿದವರ

ಶೋಷಿಸಿದವರ ಅಭಿವೃದ್ಧಿ ಹೊಂದಲು ಸಾಧ್ಯವಾಗುವುದಿಲ್ಲ. ಹಾಗೆಯೇ ಕೆಡಕಾಗುತ್ತದೆ ಎಂಬ ಪ್ರಧಾನ ಪರಿಕಲ್ಪನೆಯನ್ನು ಗ್ರಾಮ ದೇವತೆಗಳ ಪಾರಂಪರಿಕ ಜಾನಪದೀಯ ಅಧ್ಯಯನಗಳು ಸಾದರಪಡಿಸುತ್ತವೆ. ಈ ಎಲ್ಲ ಅಂಶಗಳನ್ನು ಗಮನಿಸಿದಾಗ ಗ್ರಾಮ ದೇವತೆಗಳ ಪಾರಂಪರಿಕ ಜಾನಪದೀಯ ಸಂಸ್ಕೃತಿ ನಮ್ಮಲ್ಲಿ ಸಹ ಬಾಳುವ ಸಹೋದರ ಭಾವ, ಪ್ರೀತಿ, ವಿಶ್ವಾಸವನ್ನು ಮಾನಸಿಕ ಧೈರ್ಯ ದೃಷ್ಟಿ ಮಾರ್ಗವನ್ನು ಹಿಡಿಯದೆ ಸನ್ಮಾರ್ಗದಲ್ಲಿ ನಡೆಯಬೇಕು ಎನ್ನುವ ಸತ್ವಯುಕ್ತ ಸಂದೇಶವನ್ನು ಸಾರುತ್ತದೆ.

ಗ್ರಾಮ ದೇವತೆಗಳ ಹೆಸರಿನಲ್ಲಿ ಗ್ರಾಮ ಸಮುದಾಯದ ಜನ ಆಚರಣೆಗಳ ಆಚರಣೆಗಳಗಾಗಿ ಹೆಚ್ಚು ಹಣವನ್ನು ಖರ್ಚು ಮಾಡುತ್ತಿದ್ದರು. ಇದಕ್ಕಾಗಿ ಹಾಗೆ ಡಿ ಸಾಲ ಸೋಲದ ಸೂಲಿಗೆ ಸಿಲುಕಿ ಒದ್ದಾಡುವುದನ್ನು ನಿಲ್ಲಿಸುವುದರ ಕಡೆಗೆ ಸರ್ಕಾರ ಸರ್ಕಾರೇತರ ಸಂಸ್ಥೆಗಳು ಹಾಗೂ ಪ್ರಗತಿಪರ ಸಂಘಟನೆಗಳು ಅವರಲ್ಲಿ ಅರಿವು ಮೂಡಿಸಬೇಕು. ಆ ಹೆಸರಿನಲ್ಲಿ ಅವರ ಸಾಂಸ್ಕೃತಿಕ ಪರಂಪರೆಯನ್ನು ತಡೆಯುವುದನ್ನು ನಿಲ್ಲಿಸದಿರಲಿ ಎಂಬುದನ್ನು ಅಭಿವೃದ್ಧಿಯ ಪರಿಕಲ್ಪನೆಯನ್ನು ಅಧ್ಯಯನವು ಪ್ರಸ್ತುತಪಡಿಸುತ್ತದೆ.

## ಪರಾಮರ್ಶನ ಗ್ರಂಥಗಳು

1. ಚಂದ್ರಕಲಾ ಎಚ್. ಆರ್. : **ಕೃಷ್ಣರಾಜನಗರ ತಾಲ್ಲೂಕಿನ ಗ್ರಾಮ ದೇವತೆಗಳು ಸಾಂಸ್ಕೃತಿಕ ಅಧ್ಯಯನ** : ಪಿ.ಎಚ್‌ಡಿ. ಪದವಿಗಾಗಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ – 2006.
2. ಚನ್ನಣ್ಣ ವಾಲೀಕಾರ : **ಹೈದ್ರಾಬಾದ್ ಕರ್ನಾಟಕದ ಗ್ರಾಮದೇವತೆಗಳ ಜಾನಪದೀಯ ಅಧ್ಯಯನ ;** ವಾಲೀಕಾರ ವಿರಸಂ ದಲಿತ ಬಂಡಾಯ ಸಾಹಿತ್ಯ ಪ್ರಕಾಶನ ಕೇಂದ್ರ, ಗುಲಬರ್ಗಾ, 1998.
3. ಡಾ. ಚಕ್ಕೆರೆ ಶಿವಶಂಕರ್ : **ಜಾನಪದ ತಿಳುವಳಿಕೆ ;**
4. ಪ್ರೊ. ನರಸಿಂಹಮೂರ್ತಿ ಎಂ.ಎಲ್. : **ಜಾನಪದ ಪರಾಗ (ಜಾನಪದ ಲೇಖನಗಳು)** ; ತಳಗವಾಡಿ ಪ್ರಕಾಶನ, ಮೈಸೂರು–570 009,
5. ಡಾ. ನಾಗರಾಜ ಓ. ; **ತುಮಕೂರು ಜಿಲ್ಲೆಯ ಗ್ರಾಮದೇವತೆಗಳು ಒಂದು ಅಧ್ಯಯನ ;** ವೀರಾಜನಿ ಎಂಟರ್ ಪ್ರೈಸಸ್, ಮೈಸೂರು, 2010.
6. ಡಾ. ಪಾಟೀಲ ಬಿ.ಪಿ. ; **ಗ್ರಾಮದೇವತೆಗಳು** : **ಉಪನ್ಯಾಸ ಗ್ರಂಥಮಾಲೆ 456 ;** ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1996.

7. ಬೋರಲಿಂಗಯ್ಯ ಹಿ.ಚಿ. : **“ಉಜ್ಜನಿ ಚೌಡಮ್ಮ” ಗ್ರಾಮದೇವತೆಗಳ ಅಧ್ಯಯನ ;** ಕನ್ನಡ ಪುಸ್ತಕ ಪ್ರಾಧಿಕಾರ, ಕರ್ನಾಟಕ ಸರ್ಕಾರ, ಬೆಂಗಳೂರು, ಎರಡನೆಯ ಮುದ್ರಣ, 2001.

8. ಲಿಂಗಯ್ಯ ಡಿ. **: ಕರ್ನಾಟಕದ ಗ್ರಾಮ ದೇವತೆಗಳು** ; 1984.

9. ಶಿವಶಂಕರ್ ಟಿ.ಸಿ.: **ಮಂಡ್ಯ ಜಿಲ್ಲೆಯ ಗ್ರಾಮ ದೇವತೆಗಳು ಸಾಂಸ್ಕೃತಿಕ ಅಧ್ಯಯನ ;** ಪಿ.ಎಚ್‌ಡಿ. ಪದವಿಗಾಗಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ, 2009,

10. ಡಾ. ಸಿದ್ಧಲಿಂಗಯ್ಯ **: ಗ್ರಾಮದೇವತೆಗಳು ;** ಅಂಕಿತ ಪ್ರಕಾಶನ, ಬಸವನಗುಡಿ, ಬೆಂಗಳೂರು, 2009.